**O.S. 416-23 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 10.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R N D, ವಕೀಲರಿಂದಃ**

18. ನಿಪಿ.2 ಹಾಗೂ 3 ರಲ್ಲಿ ವಾದಿ 1 ಹಾಗೂ 2 ರವರಿಗೆ ತಲಾ ಅರ್ಧ ಹಿಸ್ಸಾ ಎಂದು ನಮೂದಾಗಿದೆ ಅಂದರೆ ಸರಿ. ಈ ಕೇಸ್ ಹಾಕುವಾಗ ನಿಡಿ.1 ರಿಂದ 6 ಗಳು ನಮ್ಮ ಬಳಿ ಇದ್ದವು.ನಿಡಿ.1 ರಿಂದ 6 ಗಳ ಬಗ್ಗೆ ನಮ್ಮ ವಕೀಲರಿಗೆ ಕೊಟ್ಟು ಅವುಗಳ ಬಗ್ಗೆ ಬರೆಯಲು ಹೇಳಿದ ಬಗ್ಗೆ ನೆನಪಿಲ್ಲ. ನಾನು ಹಾಗೂ 1 ನೇ ವಾದಿ ಕೆಳ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ ಬಗ್ಗೆ ವಕೀಲರಿಗೆ ಹೇಳಿದ್ದು ನೆನಪಿಲ್ಲ. ನಿಡಿ.1 ರಿಂದ 6 ರವರು ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿದ ನಂತರ ಅವುಗಳಿಗೆ ತಕರಾರು ಸಲ್ಲಿಸಿಲ್ಲ ಹಾಗೂ ಅವುಗಳ ದಾಖಲೆಗಳನ್ನು ಹಾಜರಪಡಿಸಿಲ್ಲ. ನಿಡಿ.1 ರಿಂದ 6 ರ ಬಗ್ಗೆ ನಮ್ಮ ವಕೀಲರು ಈ ದಾವೆಯಲ್ಲಿ ಬರೆಯುವ ಬಗ್ಗೆ ಪ್ರಯತ್ನ ಮಾಡಿಲ್ಲ. ವಾದ ಪತ್ರದಲ್ಲಿ ಅಸಲು ದಾವೆ ನಂಃ 733/23 ರ ಬಗ್ಗೆ ಬರೆದಿಲ್ಲ. ಈ ಕೇಸಿನ ಬಗ್ಗೆ ತಿದ್ದುಪಡಿ ಮಾಡಲು ಅರ್ಜಿ ಕೊಟ್ಟಿಲ್ಲ. ಮೂಲ ಮಾಲಿಕರು ನಿಪಿ.10 ರಲ್ಲಿರುವ ಅಳತೆಗಳ ಕಟ್ಟಡ ಕಟ್ಟುವಾಗ ಹೋಗಿ ನೋಡಿದ ಬಗ್ಗೆ ಗೊತ್ತಿಲ್ಲ. ನನ್ನ ತಂದೆ, ವಾದಿ ನಂಃ 1, ಅಸಲು ದಾವೆ ನಂಃ 415-23 ರಲ್ಲಿರುವ ವಾದಿ ಹೋಗಿ, ನೋಡಿದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. 1 ಲಕ್ಷ 40 ಸಾವಿರ ರೂ. ಹಣದಲ್ಲಿ ನಮಗೆ ಬರಬೇಕಾದ ಬಾಕಿ ಭಾಡಿಗೆ ಹಣವನ್ನು ಮುರಿದುಕೊಳ್ಳುತ್ತೇವೆಂದು ನೋಟಿಸು ಕೊಟ್ಟಿಲ್ಲ. ನಿಡಿ.1 ಕೆಳ ನ್ಯಾಯಾಲಯದಲ್ಲಿ ದಾವಾ ಆಸ್ತಿ ಭಾಡಿಗೆ ಬಾಕಿ ಇದೆ ಎಂದು ಬರೆದಿಲ್ಲ ಹಾಗೂ ಪ್ರಾರ್ಥನೆ ಮಾಡಿಲ್ಲ. ಸದರಿ ದಾವೆಯಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಲು ತಿದ್ದುಪಡಿ ಅರ್ಜಿ ಸಲ್ಲಿಸಿಲ್ಲ. ನಿಡಿ.11 ರಲ್ಲಿ ಬರೆದು ಕಾಣಿಸಿದ ಬಾಡಿಗೆ ಬಾಕಿ ಹಣ ಬರುವುದು ಇದೆ ಎಂದು ನಿಡಿ.10 ರಲ್ಲಿ ಬರೆದು ಕಾಣಿಸಿಲ್ಲ. ಹಾಗೆ ಬರೆದು ಕಾಣಿಸುವುದಕ್ಕೆ ಒಮ್ಮೆಲೆ ನಿಡಿ.11 ರಲ್ಲಿ ಕಾಣಿಸಿದ ಭಾಡಿಗೆ ಬಾಕಿ ಇದೆ ಎಂದು ಹೇಗೆ ಆಯಿತೆಂದು ದಾಖಲೆ ಹಾಜರಪಡಿಸಿಲ್ಲ. ನಿಡಿ.11 ರಲ್ಲಿರುವ ಬಾಕಿ ಹಣಕ್ಕೆ ವಸೂಲಿ ಮಾಡಲು ಅದಕ್ಕಿಂತ ಮುಂಚೆ ಕ್ರಮ ಜರುಗಿಸಿಲ್ಲ. ನಿಡಿ.11 ರಲ್ಲಿರುವ ಕಾಣಿಸಿದ ವಿಷಯಗಳನ್ನು ನಿಡಿ.1 ರಲ್ಲಿ ಕೆಳ ನ್ಯಾಯಾಲಯದಲ್ಲಿ ಕಾಣಿಸಿಲ್ಲ. 1 ಲಕ್ಷ 40 ಸಾವಿರ ರೂ. ಹಣ ಹೆಚ್ಚಿನ ಮುಂದುವರೆದ ಭಾಡಿಗೆ ಎಂದು ತೆಗೆದುಕೊಂಡಿಲ್ಲ ಬಾಕಿ ಭಾಡಿಗೆ ಹಣ ತೆಗೆದುಕೊಂಡಿದ್ದೆವೆಂದು ಬರೆಸಿಲ್ಲ. ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿದ ನಂತರ ವಾದ ಪತ್ರವನ್ನು ತಿದ್ದುಪಡಿ ಮಾಡಿಕೊಂಡಿಲ್ಲ.

ನಿಪಿ.4 ರ ಪ್ಯಾರಾ ನಂಃ 8, ದಿಃ 30.8.2022 ಕ್ಕೆ ಅವಧಿ ವಡಾಯಿಸಿ ಹೊಸ ಕರಾರು ಪತ್ರ ಉಭಯ ಪಕ್ಷದವರಲ್ಲಿ ಆಗದ ಶಿವಾಯ ಅಂತಾ ಬರೆಯಲಾಗಿದೆ ಅಂದರೆ ಸರಿ. ಅದೇ ರೀತಿ ಪ್ಯಾರಾ ನಂಃ 7 ರಲ್ಲಿ ನಿಮ್ಮ ಹಾಗೂ ನನ್ನ ಪಕ್ಷದವರ ನಡುವೆ ಹೊಸ ಭಾಡಿಗೆ ಪತ್ರ ಆಗದ ಶಿವಾಯ ಬರೆಯಲಾಗಿದೆ ಅಂದರೆ ಸರಿ. ಅದೇ ರೀತಿ ಪ್ಯಾರಾ ನಂಃ 9 ರಲ್ಲಿ ನಿಮ್ಮ ಭಾಡಿಗೆದಾರಿಕೆ ಹಕ್ಕು ನವೀಕರಣಗೊಳ್ಳದ ಶಿವಾಯ ಎಂದು ಬರೆಯಲಾಗಿದೆ ಅಂದರೆ ಸರಿ. ನಮ್ಮ ಹೇಳಿಕೆ ಪ್ರಕಾರ ವಿಷಯ ಬರೆದು ನೋಟಿಸು ನೀಡಿದ್ದಾರೆ ಅಂದರೆ ಸರಿ. ಅದೇ ರೀತಿ ನಿಪಿ.4 ರಲ್ಲಿ ಮುಂದಿನದನ್ನು ತಮ್ಮ ವಿವೇಚನೆಗೆ ಬರೆದಿದ್ದಾರೆ ಅಂದರೆ ಸರಿ. ನಿಡಿ.11 ರಲ್ಲಿ ಪ್ಯಾರಾ ನಂಃ 8 ರಲ್ಲಿ ಕೊನೆಯದಾಗಿ ಈ ನೋಟಿಸು ಪಡೆದ 7 ದಿನಗಳಲ್ಲಿ ಮೇಲೆ ತಿಳಿಸಿದ ಹೊಸ ಭಾಡಿಗೆ ಮೊತ್ತ ಒಪ್ಪಿ ನೋಂದ ಕರಾರು ಪತ್ರ ಮಾಡಿಕೊಳ್ಳಬೇಕು. ಇಲ್ಲವೆ ನಮ್ಮ ಪಕ್ಷಗಾರರು ಖಾಲಿ ಖುಲ್ಲಾ ಕಬ್ಜಾವನ್ನು ಅದರಲ್ಲಿರುವ ಕಟ್ಟಡಗಳಿಗೆ ಇರತಕ್ಕಂತಹ ವ್ಯವಸ್ಥ.ಗಳು ಸಹ ಬಿಟ್ಟುಕೊಡಬೇಕೆಂದು ಬರೆಯಲಾಗಿದೆ ಅಂದರೆ ಸರಿ. ಸದರಿ ಭಾಗವನ್ನು ನಿಡಿ.11-ಡಿ ಎಂದು ಗುರುತಿಸಲಾಯಿತು. ಪ್ರತಿವಾದಿ 1 ಲಕ್ಷ 40 ಸಾವಿರ ರೂ. ಗಳನ್ನು ಕೊಟ್ಟಿದ್ದೇವೆಂದು ಕಾಣಿಸಿದ ನಂತರ ನಾವು ವಾದ ಪತ್ರವನ್ನು ತಿದ್ದುಪಡಿ ಮಾಡಿಕೊಂಡಿಲ್ಲ. ಸಾಮಾನ್ಯವಾಗಿ ಮಾಲಿಕರು - ಹಾಹೂ ಬಾಡಿಗೆ ದಾರರು 3 ವರ್ಷಗಳಿಗೊಮ್ಮೆ ಶೇಕಡಾ 5 ರಷ್ಟು, 5 ವಷಗಳಿಗೆ ಶೇಕಡಾ 10 ರಷ್ಟು ಭಾಡಿಗೆ ಹಣ ಹೆಚ್ಚು ಮಾಡುತ್ತಾರೆ ಅಂದರೆ ಅವರವರ ಮೇಲೆ ಅವಲಂಬನೆಯಾಗಿರುತ್ತದೆ. ಮೂಲ ಭಾಡಿಗೆದಾರ ಹಣ ಪ್ರತಿವಾದಿಯೊ ಬ್ಬನೇ ಕೊಟ್ಟಿದ್ದನೆಂದಜು ಬ್ಯಾಕ ಸ್ಟೇಟಮೆಂಟ ಹಾಜರಪಡಿಸಿದ್ದೇನೆ. ಅದು ಅವರ ಫರ್ಮದಿಂದ ಬಂದಿದೆ. ನಿಪಿ.12 ರಲ್ಲಿ ರೇಣುಕಾ ಹೊಟೇಲ ಹಾಗೂ ರೇಣುಕಾ ಮಿಲ್ಕ ಬಾರ ಇದೆ. ಆ ಕೌಂಟದಿಂದ ಹಣ ಬಂದಿದೆ. ಅವುಗಳು ಪಾರ್ಟನರಶಿಪ್ ಫರ್ಮ ಅಂದರೆ ಗೊತ್ತಿಲ್ಲ. ಕೆಳ ನ್ಯಾಯಾಲಯದಲ್ಲಿ ನಾವು ಈ ದಾವೆಯಲ್ಲಿ ಸದರಿ ಫರ್ಮ ಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ನಿಡಿ.7 ರಲ್ಲಿ ಶ್ರೀ ರೇಣುಕಾ ಸ್ವೀಟ ಎಂದು ಇದೆ ಅಂದರೆ ಸರಿ. ನಿಡಿ.8 ರಲ್ಲಿ ಶ್ರೀ ರೇಣುಕಾ ಮಿಲ್ಕ ಬಾರ ಅಂಡ ರೆಸ್ಟೊರೆಂಟ ಇದೆ ಅಂದರೆ ಸರಿ. ಫರ್ಮಗಳಿಗೆ ನೋಟಿಸು ಕೊಟ್ಟು ಕೇಸ ಹಾಕಿಲ್ಲ. ಮೂಲ ಭಾಡಿಗೆದಾರ ಪರಶುರಾಮ ಕಬಾಡೆ ರವರ ಎಲ್ಲಾ ಮಕ್ಕಳು ಸೇರಿ ವ್ಯವಹಾರ ಮಾಡುತ್ತಾರೆ ಅಂದರೆ ಗೊತ್ತಿಲ್ಲ.

ಫರ್ಮ್‌ಗಳು ಪ್ರತಿವಾದಿ ಹೆಸರಿನಲ್ಲಿಯೋ ಅಥವಾ ಮೂಲ ಭಾಡಿಗೆದಾರನ ಹೆಸರಿನಲ್ಲಿಯೋ ಎಂಬುದು ಗೊತ್ತಿಲ್ಲ. ನಿಡಿ.8 ರಲ್ಲಿ ಜ್ಞಾನದೇವ ಕಬಾಡೆ ಅಂತಾ ಫರ್ಮ್ ಅಕೌಂಟ ಇದೆ ಅಂದರೆ ಸರಿ. ಜ್ಞಾನದೇವ ಕಬಾಡೆ ರವರು ಮೂಲ ಭಾಡಿಗೆದಾರನ ಮಗ ಅಂದರೆ ಸರಿ. ಪರಶುರಾಮ ಕಬಾಡೆ ರವರು ಜೀವಂತವಿದ್ದಾಗ ಹಾಗೂ ಮರಣ ಹೊಂದಿದ ನಂತರ ಅವರ ಮಕ್ಕಳು ಬೇರೆ ಬೇರೆಯಾದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಪ್ರತಿವಾದಿ ಒಬ್ಬನೇ ದಾವಾ ಆಸ್ತಿಗಳಲ್ಲಿರುವ ಎಲ್ಲಾ ವ್ಯವಹಾರವನ್ನು ಒಬ್ಬನೇ ಮಾಲಿಕನೆಂದು ನಿಪಿ.2 ಹಾಗೂ 3 ದಾಖಲೆ ಬಿಟ್ಟರೆ ಬೇರೆ ದಾಖಲೆ ಹಾಜರಪಡಿಸಿಲ್ಲ. ನಿಡಿ.11 ರಲ್ಲಿ ಪ್ಯಾರಾ ನಂಃ 7 ರಲ್ಲಿ ಭಾಡಿಗೆ ಕರಾರು ಅವಧಿ ಮುಗಿದು ಭಾಡಿಗೆದಾರಿಕೆ ನಷ್ಟವಾಗಿದ್ದಕ್ಕೆ ನಿಮ್ಮ ವ್ಯವಹಾರಗಳಿಗೆ ಲೈಸೆನ್ಸ ನೀಡಿದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಾಣಿಜ್ಯ ಕರ ಇಲಾಖೆ, ಕಾರ್ಮಿಕ ಇಲಾಖೆ, ಆಹಾರ ಇಲಾಖೆ ಹಾಗೂ ನಾಗರೀಕ ಸರಬರಾಜು ಇಲಾಖೆಗಳಿಗೆ ಅನಧಿಕೃತವಾಗಿ ಭಾಡಿಗೆ ಸ್ವೀಕರಿಸುತ್ತಿರುವ ಮೊಬೈಲ್ ಟಾವರ್ ಅಳವಡಿಕೆ ಕಂಪನಿಗೆ ಪರವಾನಿಗೆಗಳನ್ನು ಹಿಂಪಡೆದುಕೊಳ್ಳುವಂತೆ ನೋಟಿಸು ನೀಡಲಾಗುವುದು ಎಂದು ಹೇಳಿದ್ದೇವೆ ಅಂದರೆ ಸರಿ. ಸದರಿ ಭಾಗವನ್ನು ನಿಡಿ.11(ಇ) ಎಂದು ಗುರುತಿಸಲಾಯಿತು. ನಿಡಿ.11 ನ್ನು ಕೆಳ ನ್ಯಾಯಾಲಯದಲ್ಲಿ ಹಾಜರಪಡಿಸಿರುವ ಬಗ್ಗೆ ಗೊತ್ತಿಲ್ಲ. ಅದನ್ನು ನಮ್ಮ ವಕೀಲರಿಗೆ ತೋರಿಸಿದ್ದು ನೆನಪಿಲ್ಲ. ಹೀಗೆ ಒಂದಿಲ್ಲೊಂದು ಭಾಡಿಗೆ ಹೆಚ್ಚಿಗೆ ಮಾಡಿಕೊಳ್ಳಲು ಹಾಗೂ ಮುಂದುವರೆಸಲು ನೋಟಿಸು ಕೊಟ್ಟಿದ್ದೇವೆ ಅಂದರೆ ಸರಿಯಲ್ಲ. ಸಾಮಾನ್ಯವಾಗಿ ಭಾಡಿಗೆದಾರನಿಗೆ ಒಂದು ನೋಟಿಸು ಕೊಟ್ಟು ಅದರ ಮೇಲೆ ಕ್ರಮ ಜರುಗಿಸುತ್ತಾರೆ ಅಂದರೆ ಗೊತ್ತಿಲ್ಲ. ನಿಪಿ.4, ನಿಡಿ.10 ಹಾಗೂ 11 ಗಳನ್ನು ವಕೀಲರಿಗೆ ಕೊಟ್ಟು ದಾವೆ ಮಾಡಲು ವಕೀಲರಿಗೆ ಮಾಹಿತಿ ಹೇಳಿದ್ದು ನೆನಪಿಲ್ಲ.

19. ಒಂದನೇ ವಾದಿ ಮೂಲ ಭಾಡಿಗೆದಾರ ಹಾಗೂ ಅವರ ಮಕ್ಕಳ ನಡುವೆ ಏನೂ ವ್ಯವಹಾರ ಆಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇದೆ. 1 ನೇ ವಾದಿ ಮೂಲ ಭಾಡಿಗೆದಾರ ಹಾಗೂ ಅವರ ಮಕ್ಕಳಿಂದ ಭಾಡಿಗೆ ಹಣ ತೆಗೆದುಕೊಂಡಿದ್ದಾರೆ, ಬೇರೆ ಹಣ ತೆಗೆದುಕೊಂಡಿಲ್ಲ. 1 ನೇ ವಾದಿ ಅವರ ಗಂಡ ಅನಾರೋಗ್ಯವಿದ್ದಾಗ ಮೂಲ ಭಾಡಿಗೆದಾರ ಹಾಗೂ ಅವರ ಮಕ್ಕಳಿಂದ 1 ಲಕ್ಷ ರೂ. ತೆಗೆದುಕೊಂಡಿದ್ದಾರೆ ಅಂದರೆ ಸರಿಯಲ್ಲ. ನನ್ನ ತಂದೆ ಮನೆ ರಿಪೇರಿಗೆ ಮೇಲಿನ ತರ 1 ಲಕ್ಷ ರೂ. ತೆಗೆದುಕೊಂಡಿದ್ದಾರೆ ಅಂದರೆ ಸರಿಯಲ್ಲ. ವಾದಿ ನಂಃ 1 ರವರ ಮಗನ ಮದುವೆಗೆ 9 ಲಕ್ಷ ರೂ. ತೆಗೆದುಕೊಂಡಿದ್ದಾರೆ ಅಂದರೆ ಸರಿಯಲ್ಲ.

ಒಟ್ಟು 1 ನೇ ವಾದಿ ಹಾಗೂ ನನ್ನ ತಂದೆ ಮೂಲ ಭಾಡಿಗೆದಾರ ಹಾಗೂ ಅವರ ತಂದೆಯಿಂದ 13 ಲಕ್ಷ ರೂ. ಗಳನ್ನು ತೆಗೆದುಕೊಂಡಿದ್ದಾರೆ ಅಂದರೆ ಸರಿಯಲ್ಲ. ಈ ವಿಷಯ ವೈಯಕ್ತಿಕವಾಗಿ 1 ನೇ ವಾದಿಗೆ ಮಾಹಿತಿ ಇದೆ ಅಂದರೆ ಸರಿಯಲ್ಲ. ನಿಪಿ.1 ರಲ್ಲಿ 1 ಲಕ್ಷ 50 ಸಾವಿರ ರೂ. ವರೆಗಿನ ಕಟ್ಟಡ ಕಟ್ಟಬೇಕೆಂದು ಇದೆ. ಭಾಡಿಗೆದಾರ 3 ರಿಂದ 4 ಕೋಟಿ ರೂ. ಖರ್ಚು ಮಾಡಿ ಕಟ್ಟಡ ಕಟ್ಟಿದ್ದಾರೆ ಮೇಲಿನ ಹಣ ಹಾಗೂ ಈ ಹಣ ಕಡಿತ ಮಾಡಿ ಉಳಿದ ಹಣವನ್ನು ಕೊಡಲು ನಾವು ಬಾಧ್ಯಸ್ಥರು ಅಂದರೆ ಸರಿಯಲ್ಲ. ಧರ್ಮಿಯಾನ ಉತ್ಪನ್ನದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಿಡಿ.11, ಪ್ಯಾರಾ ನಂಃ 5 ರಲ್ಲಿ ತೋರಿಸಿದ ಭಾಡಿಗೆ ಹಣ 2 ಲಕ್ಷ, 50 ಸಾವಿರ ಹಾಗೂ 20 ಸಾವಿರ ರೂ. ಬರುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ.

20. ದಾವಾ ಆಸ್ತಿ ಮುಂದೆ ಅನಾದಿ ಕಾಲದಿಂದಲೂ ಕೇಂದ್ರ ಬಸ್ ನಿಲ್ದಾಣ ಅಂದರೆ ಸರಿ. ಇದು ಜನದಟ್ಟಣೆಯಾಗುವುದರಿಂದ ಗೋಕುಲ ರೋಡಿನಲ್ಲಿ ಇನ್ನೊಂದು ಹೊಸ ಬಸ್ ನಿಲ್ದಾಣ ಮಾಡಿದ್ದಾರೆ ಅಂದರೆ ಸರಿ. ಬಿ ಆರ್ ಟಿ ಎಸ್ ಬಸ್ ಗಳಿಗೆ ನಿರ್ಮಾಣ ಮಾಡಲು ಪ್ರಾರಂಭ ಮಾಡಿದರು ಅಂದರೆ ಸರಿ. ಸದರಿ ಬಿ ಆರ್ ಟಿ ಎಸ್ ಬಸ್ ಗಳಿಗೆ ನಿರ್ಮಾಣ ಮಾಡುವಾಗ ರೋಡ ಬಂದ ಮಾಡಿದರು ಅಂದರೆ ಸರಿಯಲ್ಲ. ಪ್ಲೈ ಓವರ ಭಾಡಿಗೆ ಅವಧಿ ಮುಗಿದ ನಂತರ 2-3 ವರ್ಷಗಳ ನಂತರ ಪ್ರಾರಂಭವಾಗಿದೆ. 2016 ನವೆಂಬರ 500 ಹಾಗೂ 1000 ರೂ. ರದ್ದು ಮಾಡಿ ಸರಕಾರ ಆದೇಶ ಮಾಡಿದೆ ಅಂದರೆ ಸರಿ. ಆಗ ದಾವಾ ಆಸ್ತಿ ಯಲ್ಲಿ ನಡೆಯುವ ವ್ಯವಹಾರ ಕುಂಠಿತಗೊಂಡಿದೆ ಅಂದರೆ ಸರಿಯಲ್ಲ. ಗೋಕುಲ ರೋಡ ಹಾಗೂ ಹೊಸೂರು ರೋಡಿನಲ್ಲಿ ಬಸ್ ನಿಲ್ದಾಣವಾದ ನಂತರ ದಾವಾ ಆಸ್ತಿ ಎದುರಿಗೆ ಇರುವ ಬಸ್ ನಿಲ್ದಾಣಕ್ಕೆ ಹಳ್ಳಿ ಬಸ್ ಗಳು ಬರುತ್ತವೆ ಅಂದರೆ ಗೊತ್ತಿಲ್ಲ. ಮೊದಲಿನ ತರಹ ವ್ಯಾಪಾರ ಆಗಲಿಲ್ಲ ಅಂದರೆ ಸರಿಯಲ್ಲ. 2019-20 ರಲ್ಲಿ ಕೋವಿಡ್ ಕಾರಣದಿಂದ ಜನಸಾಮಾನ್ಯರು ಓಡಾಡುತ್ತಿರಲಿಲ್ಲ, ಕಚೇರಿಗಳು ತೆರೆದಿರಲಿಲ್ಲ, ವ್ಯವಹಾರ ನಡೆಯುತ್ತಿರಲಿಲ್ಲ. 2019 ರಲ್ಲಿ ಇಲ್ಲ, 2020 ರಲ್ಲಿ ಮಾತ್ರ ತಿಂಗಳುಗಳ ಕಾಲವೆಂದು ಹೇಳುತ್ತಾರೆ. ಜ್ಞಾನದೇವ ಕಬಾಡೆ ರವರು ಭಾಡಿಗೆದಾರನಲ್ಲ ಹಾಗೂ ಭಾಡಿಗೆ ಕೊಡುವುದು ಬಾಕಿ ಇಲ್ಲ.

ಈ ದಾವೆ ಚಾಲ್ತಿಯಲ್ಲಿರುವಾಗ ರಾಜಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಿ ಎಂದು ಹೇಳಿದ್ದರು, ಅದಕ್ಕೆ ಮಾತುಕತೆ ಕೂಡಿದ್ದೆವು ಆದರೆ ಆಗಿಲ್ಲ. ಹೋದ ವರ್ಷ ಆಗಸ್ಟ - ಸೆಪ್ಟಂಬರಗಳಲ್ಲಿ ಮಾತುಕತೆಯಾಗಿಲ್ಲ. ಲಾಕಡೌನ, ನೋಟರದ್ದು, ಹೊಸ ಬಸ್ ನಿಲ್ದಾಣ ನಿರ್ಮಾಣ, ಬಿ ಆರ್ ಟಿ ಎಸ್ ಬಸ್ ನಿರ್ಮಾಣ ಗಳಿಂದ ಸುಮಾರು 3-4 ವರ್ಷಗಳು ಭಾಡಿಗೆ ಆಸ್ತಿಗಳನ್ನು ಸರಿಯಾಗಿ ಉಪಯೋಗಿಸಲು ಆಗಿಲ್ಲ ಅಂದರೆ ಸರಿಯಲ್ಲ. ನಿಪಿ.1 ರಲ್ಲಿ 1 ಲಕ್ಷ 50 ಸಾವಿರ ರೂ. ಕಟ್ಟಡಕ್ಕೆ ಹಣ ಕಡಿತ ಮಾಡಿ ಬಡ್ಡಿ ಸಮೇತ ಉಳಿದ ಹಣ ಕೊಡಲು ಬಾಧ್ಯಸ್ಥರಿದ್ದೇವೆ ಅಂದರೆ ಸರಿಯಲ್ಲ. ನಮ್ಮ ಹಾಗೂ ಮೂಲ ಭಾಡಿಗೆದಾರನ ನಡುವೆ ಹೊಸ ಭಾಡಿಗೆ ಪತ್ರ ಮಾಡುವ ಸಲುವಾಗಿ ಮಾತುಕತೆಯಾಗಿ ಅವರು 25 ವರ್ಷ, ನಾವು 18 ವರ್ಷ ನಂತರ ಕೊನೆಯದಾಗಿ 19 ವರ್ಷ ಎಂದು ಭಾಡಿಗೆ ಮಾಡಿಕೊಳ್ಳಲು ಕಚ್ಚಾ ಭಾಡಿಗೆ ಪತ್ರ ತಯಾರಿಸಿ ನಾವು ಅವರಿಗೆ ಕೊಡುವುದು, ಅವರು ನಮಗೆ ಕೊಡುವುದು ಮಾಡಿದ್ದೇವೆ ಅಂದರೆ ಸರಿಯಲ್ಲ. ನಮ್ಮ ಹಾಗೂ ಮೂಲ ಭಾಡಿಗೆದಾರನ ಮಕ್ಕಳ ನಡುವೆ ಭಾಡಿಗೆ ಅಂತಿಮವಾಗಿ ಕಚ್ಚಾ ಭಾಡಿಗೆ ಪತ್ರ ತಯಾರಾಗಿ ಸಬ್ ರಜಿಸ್ಟ್ರಾರ ಕಚೇರಿಗೆ ಹೋಗಿ ವಿಚಾರ ಮಾಡಿಕೊಂಡು ಬಂದಿರುತ್ತಾರೆ ಅಂದರೆ ಸರಿಯಲ್ಲ. ಮೂಲ ಭಾಡಿಗೆದಾರನ ಮಕ್ಕಳು ಅವರ ಪಾಲಿನ ಭಾಡಿಗೆ ಹಣ ಕೊಟ್ಟು ಹೊಸ ಭಾಡಿಗೆ ಯನ್ನು ಮುಂದುವರೆಸಿದ್ದಾರೆ ಅಂದರೆ ಸರಿಯಲ್ಲ. ನಾವು ಮಾತುಕತೆಯಾದ ಪ್ರಕಾರ ನೋಂದ ಮಾಡಿಕೊಡದ ಕಾರಣ ಹೊಸ ಭಾಡಿಗೆಯಾಗಿಲ್ಲ ಅಂದರೆ ಸರಿಯಲ್ಲ. ಗುರುಬಸವಲಿಂಗಾಯ ನಮಃ ಅಂತಾ ನಿಗದಿತ ಭಾಡಿಗೆ ಪತ್ರ ತಯಾರು ಮಾಡಿ ಮೂಲ ಭಾಡಿಗೆ ಪತ್ರವನ್ನು ಕೊಟ್ಟಿದ್ದೇವೆ ಅಂದರೆ ಸರಿಯಲ್ಲ. ಅದು 10 ನೇ ತಿಂಗಳು 2023 ನೇ ಇಸ್ವಿಯಲ್ಲಿ ತಯಾರು ಮಾಡಿದ್ದೇವೆ ಅಂದರೆ ಸರಿಯಲ್ಲ. 2022 ಸೆಪ್ಟಂಬರ – 2041 ಆಗಸ್ಟ ವರೆಗೆ ಭಾಡಿಗೆ ಅವಧಿ ಬರೆದಿದೆ ಅಂದರೆ ಸರಿಯಲ್ಲ. ಸಬ್ ರಜಿಸ್ಟ್ರಾರ್ ಹೇಳಿದ ಪ್ರಕಾರ ಸ್ಟಾಂಪ ಡ್ಯೂಟಿ ಎಷ್ಟು ಆಗುತ್ತದೆ ಎಂದು ಚಾರ್ಟ ಮಾಡಿದ್ದೇವೆ ಅಂದರೆ ಸರಿಯಲ್ಲ. ಕಮೀಶನರವರು ದಿಃ 11.10.1982 ರಂದು ಕಟ್ಟಡ ಪರವಾನಿಗೆ ನೋಡಿ ಗುರುತಿಸಿದ್ದು ಅದನ್ನು ನಿಡಿ.13 ಎಂದು ಗುರುತಿಸಲಾಯಿತು.

**ಮುಂದಿನ ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.